17) ಕೊಂಗಳಿ
18) ಜ್ಯೋತಿ ಥಾಂಡಾ
19) ಲದಾ ಬಡಾವಣೆ.
20) ಸಹಿಗಾಂವ್ ಥಾಂಡಾ

ಭಾಲ್ಕಿ ಪಟ್ಟಣದಲ್ಲಿರುವ ಗ್ರಂಥಾಲಯ ಕಟ್ಟಡದ ಬಗ್ಗೆ

288 (657) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿರುವ ಗ್ರಂಥಾಲಯಕ್ಕೆ ಸ್ವಂತ ಕಟ್ಟಡವನ್ನು ಒದಗಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಗ್ರಂಥಾಲಯವು ಎಲ್ಲಿ ಕಾರ್ಯನಿರ್ವಹಿಸುತ್ತಿದೆ;

ಇ) ಈ ಗ್ರಂಥಾಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಗ್ರಂಥಾಲಯಕ್ಕೆ ಸ್ವಂತ ಕಟ್ಟಡವನ್ನು ಒದಗಿಸುವ ಬಗ್ಗೆಯಾಗಲಿ ಅಥವಾ ಈಗಿರುವ ಕಟ್ಟಡವನ್ನು ದುರಸ್ಥಿ ಮಾಡುವ ಬಗ್ಗೆಯಾಗಲೀ ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಕೆ. ಶಿವನಗೌಡ ನಾಯಕ್ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ಒದಗಿಸಿರುವುದಿಲ್ಲ.

ಆ) ತಹಶೀಲ್ದಾರರ ಅಧೀನದಲ್ಲಿರುವ ಬಾಡಿಗೆ ರಹಿತ ಹಳೆ ಸಬ್‌ರಿಜಿಸ್ಟಾರ್ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಇ) ಗಮನಕ್ಕೆ ಬಂದಿದೆ.

ಈ) ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ 200x200 ಅಳತೆಯ ನಿವೇಶನಕ್ಕಾಗಿ ತಹಶೀಲ್ದಾರರನ್ನು ಕೋರಲಾಗಿದೆ.